# ಹರೆಯಕ್ಕೆ ಹದವಾದ ಪಾಠ ಈ ಪಾತ್ರ



**ವಿದ್ಯಾರಾಜ್ ಉದಯದ 'ಕನ್ಯಾದಾನ' ದೀಪಿಕಾ**

◆ **ನೀವು ಬೆಂಗಳೂರಿಗೆ ಬಂದಿದ್ದು ಹೇಗೆ?**

ನನ್ನೂರು ಚಾಮರಾಜನಗರ ಬಿ.ಬಿ.ಎ. ಮುಗಿಯುತ್ತಿದ್ದಂತೆ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಸಿಕ್ಕಿತು. ಹಾಗಾಗಿ ಬೆಂಗಳೂರಿಗೆ ಬರಬೇಕಾಯಿತು. ಇಲ್ಲಿ ಕೆಲಸಕ್ಕಿಂತ ಟೀವಿ ನಿರೂಪಕಿ ಆಗುವ ಆಸೆ ಇತ್ತು. ಓದುವಾಗಲೇ ಸ್ಥಳೀಯ ವಾಹಿನಿಯಲ್ಲಿ ನಿರೂಪಣೆ ಮಾಡುತ್ತಿದ್ದೆ. ಆಕಸ್ಮಿಕವಾಗಿ ನಟನೆಗೆ ಬಂದೆ. ಇದು ನನ್ನ ಮೊದಲ ಧಾರಾವಾಹಿ.

◆ **ನಟನೆಯ ಸಂದರ್ಭದಲ್ಲಿ ಎದುರಾದ ಆತಂಕಗಳು ಏನು?**

ನಿರೂಪಣೆಯ ಕನಸಿನಲ್ಲಿದ್ದ ನನಗೆ ಅಭಿನಯ ಮಾಡುವ ಸಂದರ್ಭ ಬಂದಾಗ ಬೆರಗಾಗಿದ್ದೆ. ಇಲ್ಲಿ ಸರಳತೆಗಿಂತ ವೈಭವ ಹೆಚ್ಚು ಎಂದು ಭಾವಿಸಿದ್ದೆ. ಸಾಮಾನ್ಯಳಾದ ನನಗೆ ಇಲ್ಲಿನ ಬದುಕು ಭಿನ್ನವಾಗಿರುತ್ತದೆ ಎಂದೂ ಅನಿಸಿತ್ತು. ಮಾತ್ರವಲ್ಲ, ಇದು ಸೂಕ್ತ ಆಗಲಾರದು ಎನ್ನುವ ಅನುಮಾನದಿಂದಲೇ ಬಂದಿದ್ದೆ. ನಂತರ ವಾಸ್ತವ ಏನೆಂದು ಅರ್ಥವಾಯಿತು. ಇಲ್ಲಿಯೂ ಎಲ್ಲ ಸಹಜವಾಗಿಯೇ ಇದೆ. ನಾನು ಕೆಲಸ ಮಾಡುತ್ತಿದ್ದ ಕಂಪನಿಯ ವಾತಾವರಣಕ್ಕೂ ಇದಕ್ಕೂ ಅಂತಹ ವ್ಯತ್ಯಾಸ ಇಲ್ಲ. ಕೆಲಸ ಬೇರೆ ಇರಬಹುದು, ನಾವು ಹೇಗೆ ಇರುತ್ತೇವೆ ಎನ್ನುವುದರ ಮೇಲೆ ನಮ್ಮ ಬೆಳವಣಿಗೆ ಆಗುತ್ತದೆ. ನನಗೆ ಅತ್ಯುತ್ತಮ ಅವಕಾಶ ಸಿಕ್ಕಿದೆ. ಸಂತೋಷದಿಂದ ಇದ್ದೇನೆ.

◆ **ನಿಮ್ಮ ಪಾತ್ರ ಏಕೆ ಮಹತ್ವದ್ದು ಎಂದು ಅನಿಸುತ್ತದೆ?**

ನಾನು ದೀಪಿಕಾ ಪಾತ್ರ ನಿರ್ವಹಿಸುತ್ತಿದ್ದೇನೆ. ಅಂದರೆ ಮಂಜು ಅವರ ನಾಲ್ಕನೇ ಮಗಳು. ಓದು ಮುಗಿಸಿದ ನಂತರ ಕೆಲಸಕ್ಕೆ ಸೇರುತ್ತೇನೆ. ಬಹುತೇಕರ ಜೀವನದಲ್ಲಿ ಘಟಿಸಬಹುದಾದ ಪ್ರೀತಿಯ ಆಕರ್ಷಣೆಗೆ ಒಳಗಾಗುತ್ತೇನೆ. ಹುಡುಗನ ಬಗ್ಗೆ ಪೂರ್ವಾಪರ ಗೊತ್ತಿರುವುದಿಲ್ಲ. ಆತ ಒಂದು ಮಗುವಿನ ತಂದೆ ಕೂಡ ಆಗಿರುತ್ತಾನೆ. ಅವನಿಂದ ಮೋಸ ಹೋಗುತ್ತೇನೆ. ಹದಿಹರೆಯದಲ್ಲಿ ಹೆಣ್ಣುಮಗಳು ಎಡವಿದರೆ ಏನೆಲ್ಲ ತೊಂದರೆಗಳು ಎದುರಾಗುತ್ತವೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಈ ಪಾತ್ರ ಪ್ರತಿನಿಧಿಸುತ್ತದೆ. ಯುವತಿಯರಿಗೆ ಮಾದರಿಯ ಪಾಠ ಹೇಳುವ ಪಾತ್ರ. ಪ್ರೀತಿ ಎಲ್ಲರ ಜೀವನದಲ್ಲಿಯೂ ನಡೆಯುವ ಕ್ರಿಯೆ. ಆ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸುವುದು ಮುಖ್ಯ ಎನ್ನುವುದನ್ನು ಇದು ಹೇಳುತ್ತದೆ.

◆ **ನೀವು ಆಡಿಷನ್ ನೀಡಿದ ಅನುಭವ ಹೇಗಿತ್ತು?**

ಆಡಿಷನ್ ಬಗ್ಗೆ ಹೇಳುವುದಾದರೆ, ಇದಕ್ಕೆ ಸಂದೀಪ್ ರಾಜು ಕಾರಣ. ಅವರು ಈ ತಂಡದಲ್ಲಿ ಮುರುಳಿ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಅವರೇ ಆಡಿಷನ್‌ಗೆ ಕರೆದದ್ದು. ಮನೆಯಲ್ಲಿ ನಟನೆ ಬೇಡ ಎನ್ನುವ ನಿರ್ಬಂಧ ಇತ್ತು. ಒಮ್ಮೆ ನೋಡೋಣ ಎನ್ನುವ ಆಸೆ ನನ್ನದಾಗಿತ್ತು. ಅದಕ್ಕಾಗಿ ಮನೆಯವರ ಒಲೈಸಿದೆ. ಆಗ ಕೊರೊನಾ ಸಮಯ. ಚಾಮರಾಜನಗರದಿಂದ ಬೆಂಗಳೂರಿಗೆ ಸಮರ್ಪಕ ಸಾರಿಗೆ ವ್ಯವಸ್ಥೆ ಇರಲಿಲ್ಲ. ಕಷ್ಟಪಟ್ಟು ಆಡಿಷನ್ ನೀಡಲು ತನ್ನ ತಾಯಿ ಜೊತೆ ಬೆಂಗಳೂರಿಗೆ ಬಂದೆ. ಮೊದಲಬಾರಿಗೆ ಅಭಿನಯವನ್ನು ಕ್ಯಾಮೆರಾದ ಎದುರು ಮಾಡುತ್ತಿದ್ದೆ. ತುಂಬಾ ಭಯ ಕಾಡುತ್ತಿತ್ತು. ಅವಕಾಶ ನನಗೆ ಸಿಗಲ್ಲ ಎಂದುಕೊಂಡೇ ಮಾಡಿದೆ. ಅದಕ್ಕೆ ನಿರ್ದೇಶಕ ಅರುಣ್ ಒಂದೆರಡು ಗಂಟೆ ತರಬೇತಿ ನೀಡಿದರು. ಹದಿನೈದು ದಿನ ಕಳೆದ ಮೇಲೆ ಇದ್ದಕ್ಕಿದ್ದಂತೆ ನಟನೆಗೆ ಬರಲು ಫೋನ್ ಬಂತು. ತಂಡದಲ್ಲಿ ಬಹುತೇಕರು ಅನುಭವಿ ನಟರಿದ್ದರು. ನನ್ನನ್ನು ಬಿಟ್ಟರೆ ನನ್ನ ತಂಗಿಯಾಗಿರುವ ಮಿಂಚು ಹೊಸಬರು. ಅನುಭವಿಗಳ ಎದುರು ಅಭಿನಯ ಮಾಡುವುದು ನನಗೆ ದೊಡ್ಡ ಸವಾಲಾಗಿತ್ತು. ಅವರೆಲ್ಲರ ಸಹಕಾರದಿಂದ ಸಹಜವಾಗಿ ನಟನೆಯನ್ನು ಕಲಿತಿದ್ದೇನೆ. ಒಂದು ಸಿನಿಮಾದಲ್ಲಿ ಮಾಡುತ್ತಿದ್ದೇನೆ. ತೆಲುಗಿನಲ್ಲಿ 'ಹಂಸಗೀತಂ' ಧಾರಾವಾಹಿ ಮಾಡುತ್ತಿದ್ದೇನೆ. ತಿಂಗಳಲ್ಲಿ ಹದಿನೈದು ದಿನ ಹೈದರಾಬಾದ್ ಮತ್ತು ಹದಿನೈದು ದಿನ ಬೆಂಗಳೂರು ಎಂದು ಓಡಾಡುತ್ತಿದ್ದೇನೆ.

◆ **ಬೆಂಗಳೂರಿಗೆ ಹೊಂದಿಕೊಳ್ಳುವ ಸಂದರ್ಭ ಹೇಗಿತ್ತು?**

ಕ್ಯಾಂಪಸ್ ಸೆಲೆಕ್ಷನ್ ಆಗಿದ್ದರಿಂದ ಕೆಲಸಕ್ಕೆ ಬಂದು ಸೇರಿದೆ. ಆಗ ತುಂಬ ಭಯ ಇತ್ತು. ಪಟ್ಟಣದಿಂದ ಬಂದಿದ್ದ ನನಗೆ ಭೀತಿ ಉಂಟಾಗುತ್ತಿತ್ತು. ಆರು ತಿಂಗಳು ಅಳ್ತಾ ಇದ್ದೆ. ಕಚೇರಿಯಲ್ಲಿ ಊಟದ ಸಮಯದಲ್ಲೂ ಕಣ್ಣೀರು ಹಾಕುತ್ತಿದ್ದೆ. ಸಹೋದ್ಯೋಗಿಗಳು ಸಮಾಧಾನ ಮಾಡುತ್ತಿದ್ದರು. ಚಾಮರಾಜನಗರ ಅಂದರೆ ಹಿಂದುಳಿದ ಪ್ರದೇಶ ಅನ್ನುವುದನ್ನು ಬಿಟ್ಟರೆ, ಆ ನಗರದ ಬಗ್ಗೆ ಹೆಚ್ಚಿನ ಮಾಹಿತಿ ಅನೇಕರಿಗೆ ಇಲ್ಲ. ಅಂತಹ ಕೇಂದ್ರದಿಂದ ಬಂದಿದ್ದೇನೆ. ಏನೋ ಮಾಡುತ್ತಿದ್ದೇನೆ ಎನ್ನುವ ಖುಷಿ ಇದೆ.

■ **ರಾಘವೇಂದ್ರ ಕೆ.**